# ನುಡಿ ಎಂಬುದು

'ಮಾತೆಂಬುದು ಜ್ಯೋತಿರ್ಲಿಂಗ', 'ಮಾತೆ ಮಾಣಿಕವು' ಎನ್ನುತ್ತದೆ ಕನ್ನಡದ ಶರಣರ ವಾಙ್ಮಯ ಲೋಕ. ಆಡುವ ನುಡಿಗೆ ದೈವತ್ವವನ್ನು, ನೈತಿಕ ನಡಾವಳಿಗಳ ಮೌಲಿಕತೆಯನ್ನು ನೀಡಿರುವ ನಮ್ಮ ಸಮಾಜ 'ಮಾತಿನ' ಮೂಲಕವೇ ಸಾಮರಸ್ಯದ ಸ್ವರ್ಗದ ದಾರಿಯನ್ನು ತೋರಿಸಲು ಇರುವ ಏಕೈಕ ಮಾರ್ಗ ಎಂದು ನಂಬಿದೆ. ಸಾಮರಸ್ಯ, ನಂಬಿಕೆ ಮತ್ತು ವಿಶ್ವಾಸದ ಸಮಾಜಕ್ಕೆ ಮಾತಿಗಿಂತ ಉತ್ತಮವಾದ ಬೇರೆ ಸಾಧನ ಯಾವುದಿದೆ? ಮನುಷ್ಯನ ನುಡಿಯನ್ನು ಅರಿಯುವುದು ಎಂದರೆ; ಅದು ಮನುಷ್ಯನನ್ನೇ ಅರಿಯುವುದು ಎನ್ನುತ್ತದೆ ಆಧುನಿಕ ಜ್ಞಾನಶಾಖೆಯೊಂದು. ದುರ್ದೈವವೆಂದರೆ, ನಮ್ಮ ಸಮಾಜ ಮಾತಿನ ಮೂಲಕವೇ ನೂರಾರು ಚೂರುಗಳಾಗಿ ಒಡೆದುಹೋಗುತ್ತಿರುವುದು.

ಭಾರತದಲ್ಲಂತೂ ಸಮಾಜವನ್ನು ಒಡೆಯಲು ಆಯುಧಗಳಿಗಿಂತ, ನಂಜಿನ 'ಮಾತು'ಗಳೇ ಸಾಕು ಎನ್ನುವುದನ್ನು ನೊಂದ ಸಮುದಾಯಗಳು ಮೊದಲು ಅರಿತಿವೆ. ಅಮಲೇರಿದವರ ಒಂದೇ ಒಂದು ದ್ವೇಷದ ಮಾತಿನಿಂದ ಬೀದಿಗಳು ನಿರ್ಜನಗೊಳ್ಳುತ್ತವೆ. ಅಂಗಡಿ, ದುಖಾನುಗಳು, ಶಾಲೆ–ಕಾಲೇಜುಗಳು, ದವಾಖಾನೆಗಳು ಮುಚ್ಚಿಕೊಳ್ಳುತ್ತವೆ. ನೆರೆಹೊರೆಯವರು ಅಪರಿಚಿತರಾಗುತ್ತಾರೆ. ಎಲ್ಲ ಧರ್ಮಗಳು, ದೇವರುಗಳು ಗರ್ಭಗುಡಿಯಲ್ಲಿ ಅಡಗುತ್ತವೆ. ಜಗದ್ಗುರು, ಬಾಬಾಗಳು ತಲೆಮರೆಸಿಕೊಳ್ಳುತ್ತಾರೆ, ಆದರೆ ಖಬರ್‌ಸ್ಥಾನಗಳು ಮಾತ್ರ ಹಗಲೂ–ರಾತ್ರಿ ಬಾಗಿಲು ತೆರೆದಿರುತ್ತವೆ. ಇಂತಹ ನಂಜಿನ ಮಾತುಗಳನ್ನಾಡುವವರ ಬಳಿಯಲ್ಲಿ ಇರುವ ಒಂದು ತಾರ್ಕಿಕ ವಿಚಾರವೆಂದರೆ, ತಮ್ಮ ಮಾತನ್ನು ನಂಬದವರು ನಮ್ಮೊಡನಿರಬಾರದು ಎಂಬುದು. ಇದೊಂದು ಅಮಾನವೀಯವಾದ ವಿಕೃತ ಮಾದರಿ. ಆದರೆ ವಾಸ್ತವವಾಗಿ ಜಗತ್ತಿನಲ್ಲಿ ಕತ್ತಿಗಿಂತ ಕಡುಹರಿತವಾದ ಮಾತುಗಳಿಂದ ಜನಗಳನ್ನು ಕೊಲ್ಲುವವರ ಬಳಿಗೆ ಒಳಿತಿನ ಯಾವ ಪ್ರಾರ್ಥನೆಯ ಸೊಲ್ಲೂ ಸುಳಿಯಲಾರದು. ಇದು ಲೋಕಸತ್ಯ.

ಗಾಂಧೀಜಿ ಅವರ ಮಾತುಗಳು ತತ್ಕಾಲೀನ ವಿದ್ಯಮಾನಗಳಿಂದ ಪ್ರೇರೇಪಿತವಾಗಿದ್ದರೂ, ಅದರಲ್ಲಿ ಭಾರತದ ನೂರಾರು ಜನಸಮುದಾಯಗಳಿಗೆ ಸಾಂತ್ವನ ಇರುತ್ತಿತ್ತು. ಮನುಕುಲವನ್ನು ಬಾಧಿಸುವ ಸಮಕಾಲೀನ ಎಲ್ಲ ವ್ಯಾಧಿಗಳೂ ಉಪಶಮನಗೊಳ್ಳುವಂತಹ ಮದ್ದು ಅವರ ಮಾತುಗಳಲ್ಲಿ ಇರುತ್ತಿತ್ತು. ಅವರ ಒಂದು ಕರೆ, ಒಂದು ನಿರಶನ ಭಾರತವನ್ನು ಎಚ್ಚರಿಸುತ್ತಿತ್ತು. ಆಳುವವರ ನಿದ್ದೆಗೆಡಿಸುತ್ತಿತ್ತು. ಗಾಂಧಿ ಅವರು ಯಾವಾಗಲೂ ಜನತೆಯ ಮೇಲಿನ ಪ್ರೀತಿಯಿಂದ, ಭಾವತೀವ್ರತೆಯಿಂದ, ಗಾಢವಾದ ನಂಬಿಕೆಯಿಂದ ಮಾತನಾಡುತ್ತಿದ್ದರು. ಅವರ ಮಾತುಗಳು ಎಲ್ಲ ಅಸ್ವಸ್ಥತೆಯಿಂದ ಕಟ್ಟಿರುವ ನಮ್ಮ ಹೃದಯದ ಕವಾಟಗಳನ್ನು ತೆರೆಯುತ್ತಿದ್ದವು. ಇದು ಸತ್ಯವಂತರು, ನುಡಿಶುದ್ಧರು ಆಡುತ್ತಿದ್ದ ಮಾತಿಗೆ ನಮ್ಮ ಸಮಾಜ ತೋರುತ್ತಿದ್ದ ಬಹುದೊಡ್ಡ ಗೌರವ. ಇದನ್ನೇ 'ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು' ಎಂದು ಸಂತರು ನಮಗೆ ಬದುಕುವ ದಾರಿಯನ್ನು ತೋರಿಸಿದ್ದಾರೆ.

ಒಮ್ಮೆ ಹೀಗಾಯಿತು:

ರಾಜನೊಬ್ಬ ಒಬ್ಬ ಸಂತನ ಬಳಿಗೆ ಬಂದು, 'ಗುರುವೆ, ನನಗೆ ಸ್ವರ್ಗಕ್ಕೆ ಹೋಗುವ ದಾರಿಯನ್ನು ತೋರಿಸಿ' ಎಂದು ಕೇಳಿದ. ಆ ಸಂತ ರಾಜನನ್ನು ಆಪಾದಮಸ್ತಕ ನೋಡಿ ಮುಗುಳುನಕ್ಕು ಮೌನವಾದ. ರಾಜ ಮತ್ತೊಮ್ಮೆ ಕೇಳಿಕೊಂಡ. ಆಗ ಸಂತ 'ನೀನೊಬ್ಬ ಮತಿಗೇಡಿ ರಾಜ. ಪ್ರಜಾಪೀಡಕ. ಕ್ರೂರಿ, ನಿರ್ದಯಿ. ನೀನು ರಾಜನಾಗಲು ಯೋಗ್ಯತೆಯಿಲ್ಲದವನು. ನೀನೊಬ್ಬ ದುರುಳ...' ಎಂದು ಹೀನಾಮಾನವಾಗಿ ರಾಜನನ್ನು ನಿಂದಿಸಿದ. ಗುರುವಿನ ನಿಂದನೆಯ ಮಾತುಗಳನ್ನು ಕೇಳಿದ ರಾಜ ಕಡುಕೋಪದಿಂದ ತನ್ನ ಒರೆಯಲ್ಲಿದ್ದ ಕತ್ತಿಯನ್ನು ಎಳೆದು ಗುರುವಿನ ಮೇಲೆ ಬೀಸಲು ಮುಂದಾದ. ಆಗ ಗುರು, 'ಅಯ್ಯಾ ಮಹಾರಾಜ, ಬಾ ಕುಳಿತುಕೋ. ದಣಿವಾರಿಸಿಕೋ. ಕುಡಿಯಲು ನೀರು ಕೊಡಲೆ?' ಎಂದು ಮುಗುಳುನಗುತ್ತಾ ಹೇಳಿದ. ರಾಜ ಗುರುವಿನ ಮುಗುಳುನಗೆಯ ನಡುವಿನಿಂದ ಬಂದ ಹಿತದ ಮಾತುಗಳನ್ನು ಕೇಳಿ ನಾಚಿಕೆಯಿಂದ ಕತ್ತಿಯನ್ನು ಕೆಳಗಿಳಿಸಿ ತಲೆತಗ್ಗಿಸಿ ನಿಂತ. ಆಗ ಗುರು, 'ರಾಜನೆ, ಇದೀಗ ನೀನೆ ನೋಡಿದೆಯಲ್ಲ! ನಿಂದನಾತ್ಮಕ ಮಾತುಗಳನ್ನು ಕೇಳಿ ನೀನು ಕೆರಳಿದೆ. ಇದೇ ನರಕದ ಹಾದಿ. ನಂತರ ಮನತಣಿಯುವ ಮಾತುಗಳನ್ನು ಕೇಳಿ ಶಾಂತನಾದೆ. ಇದೇ ಸ್ವರ್ಗದ ಹಾದಿ' ಎಂದು ಹೇಳಿದ. ರಾಜನಿಗೆ ಗುರುವಿನ ಮಾತುಗಳು ತೋರಿಸಿದ ಕರುಣೆಯ ಜಗತ್ತಿನ ಪರಿಚಯವಾಯಿತು. ಕಾಠಿಣ್ಯ, ದ್ವೇಷ, ಹಿಂಸೆಯ ಎದುರಿನಲ್ಲಿ 'ಮೃದು ವಚನ' ಎಂಬುದು ಎಲ್ಲರನ್ನೂ ಮಣಿಸುವ ಸಕಲ ಜಪಂಗಳೂ ಹೌದು. ಆದ್ದರಿಂದ ಭಾಷೆ ಎನ್ನುವುದು ಬೆಳಕಿನ ಸೊಡರೆ ಹೊರತು, ಅದು ಅಂಧಕಾರವನ್ನು ತರುವುದಲ್ಲ!

ಕರುಣೆಯ ಭಾಷೆಯಿಂದ ಸಮಾಜವನ್ನು ಕಟ್ಟಬಹುದೇ ಹೊರತು, ದ್ವೇಷ, ನಂಜಿನಿಂದಲ್ಲ! ಇದು ಕೇವಲ ಸಮಾಜಕಟ್ಟುವಿಕೆಗೆ ಮಾತ್ರವಲ್ಲ, ಕಾವ್ಯ, ಕಲೆಗಳನ್ನು ಕೂಡ ನಾವು ಕರುಣೆಯ ಭಾಷೆಯಿಂದಲೇ ಕಟ್ಟಬೇಕಾಗಿದೆ. ಆದ್ದರಿಂದ ಭಾಷೆಯನ್ನು ಬಳಸುವುದು ಒಂದುಗೂಡಿಸಲು, ಭಾಷೆಯನ್ನು ಮಾನವತೆಗಾಗಿ, ಸಾಮರಸ್ಯಕ್ಕಾಗಿ ಬಳಸುವ ತುರ್ತು ಈಗ ಎಂದಿಗಿಂತ ಹೆಚ್ಚಾಗಿದೆ.

ಬಹುಸಂಸ್ಕೃತಿ, ಬಹುಧರ್ಮೀಯ, ಬಹುನಂಬಿಕೆಗಳಿರುವ ಮಾನವ ಸಮಾಜದ ಸ್ವರೂಪವನ್ನು ಅರಿಯದ ಕೆಲವೇ ತಿಳಿಗೇಡಿಗಳ ಮಾತಿನಲ್ಲಿ ವಿವಿಧ ಸಮುದಾಯಗಳು ಅಪನಂಬಿಕೆಗೆ ಒಳಗಾಗುತ್ತಿವೆ. ಅನಾಗರಿಕವೂ, ಭೀತಿಕಾರಕವೂ ಆದ ಇಂತಹ ವ್ಯಕ್ತಿ ಮತ್ತು ಸಂಸ್ಥೆಗಳಿಂದ ದೂರವುಳಿದಷ್ಟೂ ಅದರಿಂದ ಸಮಾಜಕ್ಕೆ ಹೆಚ್ಚಿನ ಒಳಿತು. ಈ ನಡೆ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ತಳಹದಿಯ ಮೇಲೆ ನಿಂತಿರುವ ಸಮಾಜವನ್ನು ಬಲಪಡಿಸುತ್ತದೆ. ಮನುಕುಲ ತನ್ನ ಸ್ವಾತಂತ್ರ್ಯ, ಸೃಜನಶೀಲತೆ ಮತ್ತು ಮಾನವ ಬಂಧುತ್ವಕ್ಕಾಗಿ ಯಾವ ಭಾಷೆಯನ್ನು ಸೃಷ್ಟಿಸಿತ್ತೋ, ಈಗ ಅದೇ ಭಾಷೆ ಮನುಕುಲವನ್ನು ಧರ್ಮ ಮತ್ತು ಜಾತಿಯ ಆಧಾರದ ಮೇಲೆ ಇಬ್ಭಾಗಿಸಲು ಬಳಕೆಯಾಗುತ್ತಿರುವುದು ದುರಂತವಲ್ಲದೆ ಮತ್ತೇನು?

ಭೋರ್ಗರೆಯುವ ಜಲಪಾತದ ನೀರು ಬಂಡೆಯನ್ನೂ ಸೀಳುತ್ತದೆ; ಆದರೆ ಅದೇ ನೀರು ಹದವರಿತು, ಮೃದುವಾಗಿ ಸುರಿದಾಗ ಹೂವು ಅರಳುತ್ತದೆ. ಮಾತೆಂಬುದೂ ಹೀಗೆಯೇ.

■ ಜಿ.ವಿ. ಆನಂದಮೂರ್ತಿ

## ಮಾತೇ ಮುತ್ತು

- ಮನುಷ್ಯನ ಉದ್ಯೋಗಕ್ಕೂ ಆದರ್ಶಕ್ಕೂ ಪರಸ್ಪರ ಹೊಂದಿಕೆ ಇಲ್ಲದೆ ಹೋದಲ್ಲಿ ಜೀವನದಲ್ಲಿ ಸುಖ ಸಿಗಲಾರದು.
  —ಶಿವರಾಮ ಕಾರಂತ
- ನಾವು ನಂಬುವ ತತ್ವಗಳಿಗಿಂತ ಬದುಕುವ ರೀತಿ ಮುಖ್ಯ.
  —ಎ.ಎನ್. ಮೂರ್ತಿರಾವ್
- ಮನಸ್ಸಿನ ವಿಕಾಸವು ಮಾನವನ ಅಸ್ತಿತ್ವದ ಅಂತಿಮ ಗುರಿಯಾಗಿರಬೇಕು.
  — ಬಿ.ಆರ್. ಅಂಬೇಡ್ಕರ್
- ವಾದ ಮಾಡುವುದರಿಂದ ತಪ್ಪಿಸಿಕೊಳ್ಳುವುದೇ ಆ ವಾದದಿಂದ ಅತ್ಯುತ್ತಮ ಲಾಭ ಪಡೆಯಲು ಇರುವ ಏಕೈಕ ಮಾರ್ಗ.
  —ಡೇಲ್ ಕಾರ್ನೆಗಿ
- ಜೀವನವೆಂಬುದು ಸೈಕಲ್ ಸವಾರಿ ಇದ್ದಂತೆ. ಸಮತೋಲನ ಇರಬೇಕೆಂದರೆ ಚಲಿಸುತ್ತಲೇ ಇರಬೇಕು.
  —ಐನ್‌ಸ್ಟೀನ್
- ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕ್ಕೆ ಮೀಸಲು ನವ ಸಂವತ್ಸರ.
  —ಕುವೆಂಪು
- ರೈತರಾದವರು ಅಗತ್ಯವಿಲ್ಲದ ವಾಹನಗಳಿಂದ ದೂರವಿರಿ. ಅವು ನಿಮ್ಮನ್ನು ಸೋಮಾರಿಯಾಗಿಸುವುದರ ಜೊತೆಗೆ ಅರ್ಥವಿಲ್ಲದ ಪೇಟೆಯ ಗೀಳನ್ನು ಹಬ್ಬಿಸುತ್ತವೆ. ಹಣಗಳಿಕೆಯ ದುರಾಸೆಯನ್ನು ತಂದೊಡ್ಡಿ ನಿಮ್ಮನ್ನು ದೀನ ಸ್ಥಿತಿಗೆ ತಂದು ಕೆಡುವುತ್ತವೆ.
  —ಎಲ್. ನಾರಾಯಣ ರೆಡ್ಡಿ